ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಮಾಡುವುದ ಕ್ಕಾಗುವುದಿಲ್ಲ. ಈಗ ಆ ರೀತಿ ಯಾರಾರಿಗೆ ಜಮೀನ್ ಕೊಡಲಾಗಿದೆಯೋ ಅವರೆಲ್ಲಾ ಬಹಳ ಬಡವರು. ಮೇಲಾಗಿ ಅವರೆಲ್ಲರೂ ಈ ವ್ಯವಸಾಯದ ಕಸಬನ್ನು ಮಾಡತಕ್ಕಂಥವರ ಸಂಸಾರಕ್ಕೆ ಸೇರಿದವರಾಗಿದ್ದಾರೆ.

ಶ್ರೀ ಎಸ್. ಹುಚ್ಚೆಮಾಸ್ತಿಗೌಡ.—ಈ ಎಕ್ಸೈಜ್ ಬಾಬನಲ್ಲಿರತಕ್ಕವರು ಮತ್ತು ಪೋಲೀಸ್ ಇಲಾಖೆಯಲ್ಲಿರತಕ್ಕವರೆಲ್ಲಾ ವ್ಯವಸಾಯಗಾರರ ಸಂಸಾರಕ್ಕೆ ಸೇರಿದವರಾಗಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಪೊಲಿಟಿಕಲ್ ನಫರರ್ಸ್‌ಗೇನಾದರೂ ಇದರಲ್ಲಿ ಜಮೀನನ್ನು ಮೀಸಲಾಗಿಟ್ಟಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಟ್ಟಿದ್ದೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಎಷ್ಟು ಅರ್ಜಿಗಳು ಈವರೆಗೆ ಬಂದಿವೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ವಿ. ವೆಂಕಟಪ್ಪ.—'ಆರ್. ದಯಾನಂದ ಸಾಗರ್, ಕ್ರಾಂತಿ, ರಾಜಕೀಯದಲ್ಲಿ ಕಷ್ಟನಷ್ಟಗಳಿಗೊಳಗಾದವರು' ಎಂದು ಹೇಳಿದೆ. ಯಾವ ರಾಜಕೀಯದಲ್ಲ ?

Sri Kadidal MANJAPPA.—I cannot give the details, but he had participated in the freedom struggle.

ಶ್ರೀ ಎ. ಮುನಿಯಪ್ಪ.—ಜಮೀನು ಹೀಗೆ ಪಡೆದು ಕೊಂಡು ಅನಂತರ ಅವುಗಳನ್ನು ಮಾರಾಟ ಮಾಡಿರ ತಕ್ಕಂಥ ಜನರು ಎಷ್ಟು ಮಂದಿ ಇದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಅಂಕಿಅಂಶಗಳೆಲ್ಲಾ ನನ್ನಲ್ಲಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಈಗ ದಾವಣಗೆರೆಯಲ್ಲಿ ಈ ಪೊಲಿಟಿಕಲ್ ನಫರರ್ಸ್‌ಗಳಿಗೆ ಜಮೀನು ಕೊಡಲು ಅಲ್ಲಿ ಜಮೀನಿಲ್ಲ. ಶಿವಮೊಗ್ಗದಲ್ಲಿ ಜಮೀನಿರುವುದರಿಂದ ಅವರಿಗೇಕೆ ಕೊಡಬಾರದು ಇಲ್ಲಿ ?

ಅಧ್ಯಕ್ಷರು.—ಈ ಪ್ರಶ್ನೆ ದಾವಣಗೆರೆಗೆ ಸಂಬಂಧಪಡುವುದಿಲ್ಲ.

ಶ್ರೀ ಎ. ಮುನಿಯಪ್ಪ.—ನುಗು ಜಲಾಶಯದ ಕೆಳಗೆ ಜಮೀನು ಮಂಜೂರಾತಿಯಿಲ್ಲದೆ ಜಮೀನು ಸಾಗುಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಪುನಃ ಸರ ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ. ಮುನಿಯಪ್ಪ.—ಈಗ ಅಲ್ಲಿ ಎಷ್ಟು ಜನ ಸಾಗುವಳಿ ಮಾಡಿಕೊಂಡಿದ್ದಾರೆ ?

Sri Kadidal MANJAPPA.—I want notice.

Mr. SPEAKER.—We shall now take up the Short Notice Question.

Dr. R. NAGAN GOWDA.—Before coming to that, I will give the names of the partners of the firm as promised to Sri Imam. Sri S. K. Guptha and Sri V. N. Subramanyam are the declared partners of this firm.

Sri J. MOHAMED IMAM.—Shall I put one or two more questions ?

Mr. SPEAKER.—No. We shall take up the short notice question.

SHORT NOTICE QUESTION AND ANSWER.

Defalcation of Funds in the Apex Bank.

* *Q*—26. **Sri S. SRINIVASA IYENGAR** (T-Narasipur).—

Will the Government be pleased to state :—

(*a*) whether it is a fact that defalcation of funds in the Apex Bank Ltd., Bangalore has been reported recently ;

(*b*) if so, the extent of defalcation;

(*c*) the action taken by them to enquire into it ?

A.—**Dr. R. NAGAN GOWDA** (Minister for Agriculture).—

(*a*) Yes.

(*b*) Rs. 13,347-4-0 are so far reported to have been misappropriated in addition to shortages in cash of Rs. 2,837.

(*c*) Police complaint has been lodged by the Apex Bank and action is being taken to conduct a detailed investigation and enquiry.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಹಣ ದುರುಪಯೋಗವಾಗಿದೆ ಎಂದು ಹೇಳಿದ್ದೀರಿ. ಯಾವ ಕಾಲದಲ್ಲಿ ಆಗಿದೆ ?

ಡಾ॥ ಆರ್. ನಾಗನಗೌಡ.—This is Short Notice question about the Apex Bank, Mysore. ಇದರಲ್ಲಿ ರೂ. 2,837-8-0 cash deficit ಮಾರ್ಚ್ ತಿಂಗಳು 8ನೇ ತಾರೀಖು cash check ಮಾಡಿದಾಗ ಕಂಡು ಬಂತು. ಇನ್ನೂ ಲೆಕ್ಕುಗಳನ್ನು ನೋಡಿದಾಗ, 1953ನೇ ಜೂನ್‌ನಲ್ಲಿ Land Mortgage Bank 10 ಸಾವಿರ ರೂಪಾಯಿ cheque ಅಮೇಲೆ 2,500 ರೂಪಾಯಿ cheque ಗಮನಕ್ಕೆ ಬಂತು. ಜೂನ್ 1954ರಲ್ಲಿ 436 ರೂಪಾಯಿ ಚಕ್ಕಿನ ಸಂಬಂಧದಲ್ಲಿ ಖೋತಾ ಬಂದಿದೆ. ಅದೇ ತರಹ 1954ನೇ ಅಕ್ಟೋಬರ್‌ನಿಂದ ಫೆಬ್ರವರಿ 1955ರ ವರೆಗೆ City Housing Co-operative Society ಸಂಬಂಧವಾಗಿ 612 ರೂಪಾಯಿಗಳವರೆಗೂ ಕಡಿಮೆ ಬಂದಿದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—1953ನೇ ಇಸವಿಯಲ್ಲಿ 10 ಸಾವಿರ ರೂಪಾಯಿ ಹಣ ದುರುಪಯೋಗವಾಗಿದೆ ಎಂದು ಹೇಳಿದ್ದೀರಿ. ಇದುವರೆಗೆ ಆ ವಿಚಾರದಲ್ಲಿ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲವೇ ?

ಡಾ॥ ಆರ್. ನಾಗನಗೌಡ.—Audit Reports 31-3-1954ರವರೆಗೆ ತಯಾರಾಗಿದೆ: Audit ಮಾಡಿದವರಿಗೆ ಅದು ಕಂಡು ಬರಲಿಲ್ಲ. ಆದ್ದರಿಂದ Audit Reportನಲ್ಲಿ ಅದನ್ನ ಕಾಣಿಸಿಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಹಣ ದುರುಪಯೋಗವಾಗಿದೆಯೆಂದು ಈಗ ಹೇಗೆ ಗೊತ್ತಾಯಿತು?

ಡಾ॥ ಆರ್. ನಾಗನಗೌಡ.—ನಾನು ಹೇಳಿದ ಹಾಗೆ, ಮಾರ್ಚ್ 8ನೇ ತಾರೀಖು cash check ಮಾಡಿದಾಗ 2,837 ರೂಪಾಯಿಗಳು ಕಡಿಮೆ ಬಂತು. ಆ ತರುವಾಯ cashier disappear ಆದರು. ಆದಕಾರಣ ಅನುಮಾನ ಬಂತು. ಆಮೇಲೆ ಇನ್ನೂ ಏನೇನಿದೆ ಎಂದು ಎಲ್ಲಾ ಪರಿಶೋಧನೆ ಮಾಡಿದರು. ಈಗ ಹಿಂದಿನ Accounts ಪರಿಶೋಧನೆ ಮಾಡುವುದಕ್ಕೆ Senior Co-operative Sub-Registrarನ್ನು ನೇಮಕಮಾಡಿ Accountsನ್ನೆಲ್ಲಾ ನೋಡುತ್ತಿದ್ದಾರೆ. ಇನ್ನೂ ಏನೇನು ಕಂಡುಬರುತ್ತದೆ ಎಂಬುದು ಇನ್ನೂ ಕೆಲವು ದಿವಸಗಳಲ್ಲಿ ಗೊತ್ತಾಗುತ್ತದೆ. ಬ್ಯಾಂಕಿನಲ್ಲಿ ತಮಗೆ ಗೊತ್ತಿದ್ದ ಹಾಗೆ ಒಬ್ಬ Chartered Accountant ಈ Accountsನ್ನೆಲ್ಲಾ audit ಮಾಡುತ್ತಿದ್ದಾರೆ. ಒಬ್ಬ Chartered Accountant, Internal Auditor ಆಗಿ ಬ್ಯಾಂಕಿನಲ್ಲಿ ಕೆಲಸ ಮಾಡಿದ್ದಾರೆ. ಅವರನ್ನು ಈಗ ನಾವು suspensionನಲ್ಲಿಟ್ಟಿದ್ದೇವೆ. Manager ಸಹ Chartered Accountant ಆಗಿದ್ದಾರೆ. ಅಷ್ಟು ಮಂದಿ ಇರುವುದರಿಂದ Accountsನಲ್ಲಿ ಏನೂ ತಪ್ಪು ಇರಲಿಕ್ಕಿಲ್ಲ ಎಂದುಕೊಂಡಿದ್ದೆವು

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ದುರುಪಯೋಗವಾದ ಹಣದ ವಸೂಲಾತಿಗೆ ಮತ್ತು ತಪ್ಪು ಮಾಡಿದವರಿಗೆ ಶಿಕ್ಷೆ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಡಾ॥ ಆರ್. ನಾಗನಗೌಡ.—ಆಗಲೇ ಪೋಲೀಸ್ ಕಂಪ್ಲೇಂಟ್ ಕೊಟ್ಟಿದ್ದೇವೆ. Cashier ಮೇಲೆ ಪೋಲೀಸ್ ಕಂಪ್ಲೇಂಟ್ ಕೊಟ್ಟಿದ್ದೇವೆ. ಮತ್ತು ಈಗ Internal Auditorನ್ನು suspensionನಲ್ಲಿಟ್ಟಿದ್ದೇವೆ. ಅವರಮೇಲೆ ಒಂದು ಕಂಪ್ಲೇಂಟ್ launch ಮಾಡಿದ್ದೇವೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಕಳೆದ ಆರು ವರ್ಷಗಳಿಂದ Apex ಬ್ಯಾಂಕ್ ಲೆಕ್ಕದ ಆಡಳಿತವನ್ನು ವಿಮರ್ಶೆ ಮಾಡುವುದಕ್ಕೆ ಕೂಡಲೆ ಕಾರ್ಯ ಕ್ರಮ ಕೈಗೊಳ್ಳುತ್ತೀರಾ?

ಡಾ॥ ಆರ್. ನಾಗನಗೌಡ.—ಆಗಲೇ ಹೇಳಿದೆ. ಒಬ್ಬ Senior Co-operative Sub-Registrarನ್ನು ಮೈಸೂರು Co-operative Societyಗಳ Act Section 39ರ ಪ್ರಕಾರ actual state of affairs ಏನು ಇದೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಒಂದು enquiry ಮಾಡಲು ಏರ್ಪಾಡು ಮಾಡಿದ್ದೇವೆ.

ಶ್ರೀ ಟಿ. ಸಿ. ಬಸಪ್ಪ.—ಹತ್ತು ಸಾವಿರ ರೂಪಾಯಿ ಕಡಿಮೆ ಬಂದಿರುವುದು ಕ್ಯಾಷೋ ಅಥವಾ ಚಕ್ಕೋ?

ಡಾ॥ ಆರ್. ನಾಗನಗೌಡ.—ಅದು ಚಕ್ಕು.

ಶ್ರೀ ಟಿ. ಸಿ. ಬಸಪ್ಪ.—ಪ್ರತಿ ತಿಂಗಳಿನಲ್ಲಿಯೂ ಬ್ಯಾಂಕಿನ ಅಕೌಂಟು ಬಂದಾಗ ಬ್ಯಾಂಕಿನ ಅಕೌಂಟಿಗೂ Apex ಬ್ಯಾಂಕಿನ ಅಕೌಂಟಿಗೂ tally ಮಾಡುವುದಿಲ್ಲವೇ?

ಡಾ॥ ಆರ್. ನಾಗನಗೌಡ.—ಅಕೌಂಟ್ಸ್ ಇಡುವುದಕ್ಕೆ ಬೇಕಾದ ಸಿಬ್ಬಂದಿ ಎಲ್ಲಾ ಇದೆ. Internal Auditors ಇದ್ದಾರೆ. ಅಕೌಂಟ್ ಮಾಡುವ ರೀತಿಯಲ್ಲಿ ಮಾಡುತ್ತಾರೆಂದು ತಿಳಿದು ಕೊಂಡಿದ್ದೇನೆ.

ಶ್ರೀ ಟಿ. ಸಿ. ಬಸಪ್ಪ.—Auditor ಬ್ಯಾಂಕ್ account tally ಮಾಡಿದಾಗ, ವ್ಯತ್ಯಾಸ ಸಿಕ್ಕಲಿಲ್ಲವೇ?

ಡಾ॥ ಆರ್. ನಾಗನಗೌಡ.—ಇಲ್ಲ. 1954ನೇ ಜೂನ್ 30ನೇ ತಾರೀಖು Audit Reportನ್ನು 1954ನೇ August 23ರಲ್ಲಿ General Bodyಗೆ ಒಪ್ಪಿಸಿದ್ದಾರೆ. ಅದರೊಳಗೆ 1953ರಲ್ಲಿ ಚಕ್ಕಿಗೆ ಸಂಬಂಧವಾದ ರೂಪಾಯಿಗಳು ಕಡಿಮೆ ಬಿದ್ದಿರುವುದು ರಿಪೋರ್ಟ್ ಆಗಿಲ್ಲ. ಅದನ್ನು ವಿಚಾರ ಮಾಡುವುದಕ್ಕೆ investigation ಜರುಗಿಸುತ್ತೇವೆ.

ಶ್ರೀ ಟಿ. ಸಿ. ಬಸಪ್ಪ.—Accountant security ಕೊಟ್ಟಿದ್ದಾರೆಯೇ?

Dr. R. NAGAN GOWDA.—I want notice for that.

ಶ್ರೀ ವಿ. ಮುನಿಯಪ್ಪ.—Accountant ಕರ್ತವ್ಯವಾಗಿ Security deposit ಕೊಡಬೇಕೆಂದು ಏಪೆಕ್ಸ್ ಬ್ಯಾಂಕಿನ ರೂಲ್ಸ್‌ನಲ್ಲಿ ಇಲ್ಲವೇ?

ಡಾ॥ ಆರ್. ನಾಗನಗೌಡ.—ನಾನು ಅದನ್ನು ನಿರ್ದಿಷ್ಟವಾಗಿ ಹೇಳಲಾರೆ. ಮಾನ್ಯ ಸದಸ್ಯರು Apex Bank Director ಆಗಿರುವುದರಿಂದ ಅವರಿಗೆ ಗೊತ್ತಿರಬೇಕು.

Undisposed of Questions.

Mr. SPEAKER.—We shall now take up question No. 205.

Sri T. HANUMIAH.—I want answers from the Revenue Minister, Sir.

Mr. SPEAKER.—Regarding question No. 205, the other day I had announced to take up the questions for which Government had deferred to give answers.

Sri Kadidal MANJAPPA.—We will take it up tomorrow, Sir.

Sri A. G. RAMACHANDRA RAO.—There are some other questions also.

Q.No. 289. Motor Vehicles purchased in 1953-54 and 1954-55.

(For previous supplementaries please refer to pages 2492 of 46th Number of this volume).

Sri J. MOHAMED IMAM.—The Minister promised to give more comprehensive information regarding this.

Sri A. G. RAMACHANDRA RAO.—The other day the question was to give the analysis of the vehicles purchased